ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ-೨೦**

# ಕರ್ನಾಟಕ ವಿಧಾನ ಪರಿಷತ್ತು

**ನೂರ ನಲವತ್ತಮೂರನೆಯ ಅಧಿವೇಶನ**

**(ಮುಂದುವರೆದ ಉಪವೇಶನಗಳು)**

**ಗುರುವಾರ, ದಿನಾಂಕ: ೨೫ನೇ ಮಾರ್ಚ್, ೨೦೨೧**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

೩. ಸಣ್ಣ ನೀರಾವರಿ ಸಚಿವರು

೪. ಅಬಕಾರಿ ಸಚಿವರು

೫. ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು

---

## ಕೆಂಪೇಗೌಡರ ಸಮಾಧಿ ಸ್ಥಳವಾದ ಕೆಂಪಾಪುರವನ್ನು ಪ್ರವಾಸಿತಾಣವಾಗಿಸುವ ಬಗ್ಗೆ

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು ) –**

೨೮೬ (೨೧೧೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿರಿಯ ಕೆಂಪೇಗೌಡರ ಸಮಾಧಿ ಸ್ಥಳವಾದ ಕೆಂಪಾಪುರವನ್ನು ಪ್ರವಾಸಿ ಸ್ಥಳವಾಗಿ ಅಭಿವೃದ್ಧಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ; ಈ ಬಗ್ಗೆ ರೂಪುರೇಷೆಗಳನ್ನು ಸಿದ್ದಪಡಿಸಲಾಗಿದೆಯೇ;

(ಆ) ಮಾಗಡಿ ಪಟ್ಟಣದಲ್ಲಿರುವ ಕೆಂಪೇಗೌಡರ ಕಾಲದ ಕೋಟೆಯನ್ನು ಅಭಿವೃದ್ಧಿಪಡಿಸಲಾಗಿದೆಯೇ; ಇದುವರೆಗೆ ಮುಕ್ತಾಯವಾಗಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು; ಇನ್ನೂ ಆಗಬೇಕಾಗಿರುವ ಕಾಮಗಾರಿಗಳು ಯಾವುವು;

(ಇ) ಸಾವನದುರ್ಗ ಪ್ರವಾಸಿ ಕೇಂದ್ರದ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಯಾವುವು; ಸಾವನದುರ್ಗಕ್ಕೆ ಬೆಂಗಳೂರಿನಿಂದ ಪ್ರವಾಸಿಗಳ ಅನುಕೂಲಕ್ಕಾಗಿ ನಿಯಮಿತ ಅವಧಿಯಲ್ಲಿ ಕೆಂಪು ಭೋರ್ಡಿನ ಗ್ರಾಮಾಂತರ ನಗರ ಸಾರಿಗೆ ಬಸ್‌ಗಳನ್ನು ಓಡಿಸಲು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯೊಡನೆ ಸಂಪರ್ಕಿಸಿ ಸೂಕ್ತ ಕ್ರಮ ಜರುಗಿಸಲಾಗುವುದೇ?

## ನದಿ ತೀರದ ಪ್ರದೇಶದ ಜಮೀನು/ರಸ್ತೆ/ಬೆಳೆ ಹಾನಿಯಾಗುತ್ತಿರುವ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೮೭ (೨೧೯೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ಪ್ರತಿ ವರ್ಷ ಮಳೆಗಾಲದಲ್ಲಿ ನದಿಗಳು ಉಕ್ಕಿ ಹರಿಯುವುದರಿಂದ ನದಿ ತೀರದ ಪ್ರದೇಶಗಳಲ್ಲಿ ಜಮೀನು/ಬೆಳೆ/ರಸ್ತೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹಾನಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಮಳೆಗಾಲದಲ್ಲಿ ಪ್ರವಾಹವನ್ನು ಶಾಶ್ವತವಾಗಿ ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು ಮತ್ತು ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆಯೇ; ಇದ್ದಲ್ಲಿ, ವಿವರ ಒದಗಿಸುವುದು?

## ಬೆಂಗಳೂರಿನ ಜಕ್ಕೂರು ಏರೋಡ್ರೋಂನ ಬಗ್ಗೆ

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು ) –**

೨೮೮ (೨೧೩೧) ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಜಕ್ಕೂರು ಏರೋಡ್ರಂನ ಒಟ್ಟು ವಿಸ್ತೀರ್ಣವೆಷ್ಟು; ಈ ಜಾಗದಲ್ಲಿ ಒತ್ತುವರಿ ಏನಾದರೂ ಆಗಿದೆಯೇ; ಹೆಚ್ಚುವರಿ ಜಾಗದ ಅವಶ್ಯಕತೆ ಎಷ್ಟು; (ವಿವರಗಳನ್ನು ಒದಗಿಸುವುದು)

(ಆ) ಪ್ರಸ್ತುತ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಕಾರ್ಯನಿರ್ವಹಿಸುತ್ತಿದೆಯೇ; ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು; ಕಾರ್ಯನಿರ್ವಹಿಸಲು ಏನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; (ವಿವರಗಳನ್ನು ಒದಗಿಸುವುದು)

(ಇ) ಪೈಲಟ್ ಕೋರ್ಸ್ ಪ್ರವೇಶಕ್ಕೆ ಇರುವ ಮಾನದಂಡಗಳೇನು; ಅದರ ಶುಲ್ಕ ಎಷ್ಟು; ಇದುವರೆವಿಗೆ ಎಷ್ಟು ಪೈಲಟ್‌ಗಳಿಗೆ ತರಬೇತಿ ನೀಡಲಾಗಿದೆ; (ವರ್ಷವಾರು ವಿವರಗಳನ್ನು ಒದಗಿಸುವುದು)

(ಈ) ಪೈಲಟ್ ತರಬೇತಿಗಾಗಿ ಖರೀದಿಸಲಾದ ವಿಮಾನಗಳು ಎಷ್ಟು; ಅವುಗಳ ನಮೂನೆ, ಸಾಮರ್ಥ್ಯ ಹಾಗೂ ದರಗಳು ಎಷ್ಟು; ಇವುಗಳಲ್ಲಿ ಎಲ್ಲಾ ವಿಮಾನಗಳು ಕಾರ್ಯನಿರ್ವಹಿಸುತ್ತಿವೆಯೇ; (ವಿವರಗಳನ್ನು ಒದಗಿಸುವುದು)

(ಉ) ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಒಟ್ಟು ಸಿಬ್ಬಂದಿ (ಪೈಲಟ್‌ಗಳೂ ಸೇರಿದಂತೆ) ಎಷ್ಟು; ಖಾಲಿ ಇರುವ ಹುದ್ದೆಗಳು ಎಷ್ಟು; ಈ ಶಾಲೆ ತಾಂತ್ರಿಕವಾಗಿ ಆಧುನಿಕ ಯುಗಕ್ಕೆ ತಕ್ಕಂತೆ ಸಮರ್ಪಕ ಹಾಗೂ ಗುಣಮಟ್ಟದ ಮೂಲಭೂತ ಸೌಲಭ್ಯ ಹಾಗೂ ಬೋಧಕ ವರ್ಗ ಹೊಂದಿದೆಯೇ; ಈ ಶಾಲೆಯಲ್ಲಿ ಡ್ರೋಣ್ ತರಬೇತಿಯನ್ನು ನೀಡಲಾಗುತ್ತಿದೆಯೇ; (ವಿವರಗಳನ್ನು ಒದಗಿಸುವುದು)

(ಊ) ಜಕ್ಕೂರು ಏರೋಡ್ರಂನಲ್ಲಿ ವಿಮಾನಗಳನ್ನು ನಿರ್ವಹಿಸುವ ಕಟ್ಟಡ (Hangers) ಗಳಿವೆಯೇ; ಅವುಗಳ ನಿರ್ವಹಣೆಯನ್ನು ಸರ್ಕಾರ ಯಾರಿಗೆ ವಹಿಸಿದೆ: (ಸಂಪೂರ್ಣ ವಿವರ ಒದಗಿಸುವುದು)

(ಋ) ಈ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ?

## BDA ನಲ್ಲಿ Change of Land use ಬಗ್ಗೆ

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೮೯ (೨೧೯೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (BDA) ವನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ಉದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಪ್ರಾಧಿಕಾರ ಯಾವ–ಯಾವ ಉದ್ದೇಶಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸಿ ಹಸ್ತಾಂತರಿಸಲು ಅಧಿಕಾರ ಹೊಂದಿದೆ; (ವಿವರವಾಗಿ ಉದ್ದೇಶವಾರು ಮಾಹಿತಿ ನೀಡುವುದು)

(ಇ) ಭೂ ಉಪಯೋಗ/ಭೂಮಿ ಉಪಯೋಗ (Land use) ಎಂದರೇನು; ಎಷ್ಟು ವಿಧವಾದ ಭೂ ಉಪಯೋಗಗಳಿವೆ; ಸದರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಭೂ ಉಪಯೋಗಗಳಾವುವು;

(ಈ) ಭೂ ಉಪಯೋಗ/ಭೂಮಿ ಉಪಯೋಗ ಬದಲಾವಣೆ (Change of Land use) ಅಂದರೇನು; ಅವುಗಳಲ್ಲಿ ಎಷ್ಟು ವಿಧ; ಅವು ಯಾವುವು; ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಷ್ಟು ವಿಧದ Change of Land use ಬರುತ್ತವೆ; (ವಿವರವಾದ ಮಾಹಿತಿ ನೀಡುವುದು)

(ಉ) ಜನವರಿ ೨೦೧೮–೧೯ ರಿಂದ ೨೦೨೦–೨೦೨೧ ರವರೆಗೆ ಸದರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಷ್ಟು Change of Land use ಪ್ರಕರಣಗಳು ನಡೆದಿವೆ; (ವಿವರವಾಗಿ ಬಡಾವಣೆವಾರು, ವರ್ಷವಾರು ಮಾಹಿತಿ ಕೊಡುವುದು)

(ಊ) Change of Land use ಮಾಡುವ ಅಧಿಕಾರವು ಪ್ರಾಧಿಕಾರಕ್ಕಿದೆಯೇ ಅಥವಾ ಸರ್ಕಾರಕ್ಕಿದೆಯೇ?

## ನೂತನ ಕೆರೆ, ಮತ್ತು ಅಣೆಕಟ್ಟುಗಳ ನಿರ್ಮಾಣದ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೯೦ (೨೧೨೨) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಣ್ಣ ನೀರಾವರಿ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಎಷ್ಟು ನೂತನ ಕೆರೆಗಳನ್ನು, ಪಿಕಪ್ ಭಂಡಾರಗಳನ್ನು ಮತ್ತು ಅಣೆಕಟ್ಟುಗಳನ್ನು ನಿರ್ಮಾಣ ಮಾಡಲಾಗಿದೆ; ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ಕಾಮಗಾರಿಗಳಿಗಾಗಿ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು; ಇದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕಾಮಗಾರಿವಾರು ವಿವರ ನೀಡುವುದು)

(ಆ) ಸದರಿ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಎಷ್ಟು ಕೆರೆಗಳನ್ನು, ಪಿಕಪ್ ಭಂಡಾರಗಳನ್ನು ಮತ್ತು ಅಣೆಕಟ್ಟುಗಳನ್ನು ನಿರ್ಮಾಣ ಮಾಡಲಾಗಿದೆ; ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ಕಾಮಗಾರಿಗಳಿಗಾಗಿ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು; ಇದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕಾಮಗಾರಿವಾರು ವಿವರ ನೀಡುವುದು)

(ಇ) ಸದರಿ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ಹಾಸನ ಜಿಲ್ಲೆಯ ಯಾವ ಯಾವ ಕೆರೆಗಳ ರಿಪೇರಿ, ಪುನಶ್ಚೇತನ ಮತ್ತು ನವೀಕರಣ ಕಾಮಗಾರಿಗಳನ್ನು ಮಾಡಲಾಗಿದೆ; ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ಕಾಮಗಾರಿಗಳಿಗಾಗಿ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು; ಇದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ಕಾಮಗಾರಿವಾರು ವಿವರ ನೀಡುವುದು)

## ನಿರ್ಭಯಾ ನಿಧಿಯ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು ) –**

೨೯೧ (೨೧೪೯) ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೫ ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಪೊಲೀಸ್ ಇಲಾಖೆಯು ನಿರ್ಭಯಾ ನಿಧಿಯನ್ನು ಯಾವ ಯಾವ ವಿಷಯಗಳಿಗೆ ವೆಚ್ಚ ಮಾಡಿದೆ; (ವಿಭಾಗವಾರು ಮಾಹಿತಿ ನೀಡುವುದು)

(ಆ) ಹೆಚ್ಚುವರಿ ಪೋಲಿಸ್ ಆಯುಕ್ತರು ನಿರ್ಭಯಾ ನಿಧಿಯ ವೆಚ್ಚದಲ್ಲಿ ಭ್ರಷ್ಟಾಚಾರ ಎಸಗಿರುವ ಬಗ್ಗೆ ಸರ್ಕಾರದ ಗೃಹ ಇಲಾಖೆಯ ಕಾರ್ಯದರ್ಶಿಗಳು ಹೇಳಿಕೆ ನೀಡಿರುವ ಕುರಿತು ಪತ್ರಿಕೆಗಳಲ್ಲಿ ವರದಿಯಾಗಿದ್ದು ಈ ಕುರಿತು ಸರ್ಕಾರದ ನಿಲುವೇನು;

(ಇ) ನಿರ್ಭಯಾ ನಿಧಿಯ ವೆಚ್ಚದಲ್ಲಿ ಭ್ರಷ್ಟಾಚಾರವಾಗಿದೆಯೇ; ಇಲ್ಲವಾದಲ್ಲಿ, ಸರ್ಕಾರದ ಕಾರ್ಯದರ್ಶಿಗಳು ರಾಜ್ಯದ ಜನತೆಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆಯೇ; ಈ ಕುರಿತು ಸರ್ಕಾರದ ನಿಲುವೇನು;

(ಈ) ಭ್ರಷ್ಟಾಚಾರವೆಸಗಿದ ಆರೋಪ ಹೊತ್ತಿರುವ ಅಧಿಕಾರಿಯ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಮದ್ಯಪಾನದಿಂದ ಆಗುವ ದುಷ್ಪರಿಣಾಮ ಹಾಗೂ ಮದ್ಯದಂಗಡಿಗಳಿಗೆ ಪರವಾನಿಗೆ ನೀಡುವ ಕುರಿತು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

**ಶ್ರೀ ಹೆಚ್. ಎಂ. ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು ) –**

೯೨ (೨೨೦೫+೨೧೨೫) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮದ್ಯಪಾನದಿಂದ ಸಮಾಜದಲ್ಲಿ ದುಷ್ಪರಿಣಾಮಗಳುಂಟಾಗುತ್ತಿದ್ದು, ಹಲವಾರು ಕುಟುಂಬಗಳು ಬೀದಿಪಾಲಾಗುತ್ತಿದ್ದರೂ ಸಹ ಮದ್ಯದಂಗಡಿಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡುತ್ತಿರುವುದು ಸರಿಯೇ;

(ಆ) ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಲ್ಲೆಲ್ಲಿ ಎಷ್ಟೆಷ್ಟು ಮದ್ಯದಂಗಡಿಗಳನ್ನು ತೆರೆಯಬೇಕೆಂಬ ಬಗ್ಗೆ ಸಮೀಕ್ಷೆ ಮಾಡಲಾಗಿದೆ; ಯಾವ ಆಧಾರದಲ್ಲಿ ಅನುಮತಿ ನೀಡಲಾಗುತ್ತದೆ;

(ಇ) ರಾಜ್ಯದಲ್ಲಿ ಸಿಎಲ್೨, ಸಿಎಲ್೪, ಸಿಎಲ್೬ಎ, ಸಿಎಲ್೭, ಸಿಎಲ್೯, ಸಿಎಲ್೧೧ಸಿ, ಆರ್‌ವಿ.ಬಿ ಮತ್ತು ಇತರೆ ಪರವಾನಗಿಗಳನ್ನು ನೀಡಲು ಹಾಗೂ ಪಡೆಯಲು ಅನುಸರಿಸುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು)

(ಈ) ಒಂದು ಪರವನಾಗಿ ಪಡೆದ ಉದ್ದಿಮೆದಾರರು ಅದೇ ಪರವಾನಗಿಯಡಿಯಲ್ಲಿ ಜಿಲ್ಲೆಯ ಬೇರೆ ಬೇರೆ ಜಾಗಗಳಲ್ಲಿ ಅಬಕಾರಿ ಮಳಿಗೆಗಳು/ಬಾರ್ ಅಂಡ್ ರೆಸ್ಟೋರೆಂಟ್ ಹಾಗೂ ಇತರೆ ಮಳಿಗೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಉ) ಪರವಾನಗಿ ಮಂಜೂರು ಮಾಡುವ ಸಂದರ್ಭದಲ್ಲಿ ಅಧಿಕಾರಿಗಳು ಮಾನದಂಡಗಳನ್ನು ಅನುಸರಿಸದೇ ಉಲ್ಲಂಘನೆ ಮಾಡಿ ಪರವಾನಗಿ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಯಾವ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಊ) ರಾಜ್ಯದಲ್ಲಿ ಪರವಾನಗಿ ಮಂಜೂರು ಮಾಡುವ ಸಂದರ್ಭದಲ್ಲಿ ಮಾನದಂಡಗಳನ್ನು ಅನುಸರಿಸದೇ ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳೆಷ್ಟು; (ವಿವರ ನೀಡುವುದು) ಸದರಿ ಪ್ರಕರಣಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

## ಬೆಂಗಳೂರು ನಗರದಲ್ಲಿರುವ ಕೆರೆಗಳ ಪರಿಸ್ಥಿತಿ ಕುರಿತು

**ಶ್ರೀ ಪಿ. ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು ) –**

೨೯೩ (೨೧೫೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಕಂದಾಯ ದಾಖಲೆಗಳ ಪ್ರಕಾರ ಒಟ್ಟು ಎಷ್ಟು ಕೆರೆಗಳಿವೆ; ಎಷ್ಟು ಕೆರೆಗಳು ಕೆರೆಯ ಗುಣಲಕ್ಷಣಗಳನ್ನು ಕಳೆದುಕೊಂಡು ಇತರ ಚಟುವಟಿಕೆಗೆ ಉಪಯೋಗವಾಗಿವೆ; ಒಟ್ಟು ಎಷ್ಟು ಕೆರೆಗಳಲ್ಲಿ ನೀರಿನ ಸಂಗ್ರಹಣೆ ಇದೆ ಹಾಗೂ ಎಷ್ಟು ಕೆರೆಗಳನ್ನು ಪುನಶ್ಚೇತನಗೊಳಿಸಲಾಗಿದೆ; ಮುಂದೆ ಪುನಶ್ಚೇತನಗೊಳಿಸಲು ಅವಶ್ಯಕತೆ ಇರುವ ಕೆರೆಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿಯನ್ನು ನೀಡುವುದು)

(ಆ) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ವತಿಯಿಂದ ನಗರದಲ್ಲಿ ಹೊಸದಾಗಿ ಬಿಬಿಎಂಪಿಗೆ ಸೇರ್ಪಡೆಗೊಂಡ ಅಧಿಕೃತ ಹಾಗೂ ಅನಧಿಕೃತ ಬಡಾವಣೆಗಳಲ್ಲಿ ನಿರ್ಮಾಣಗೊಂಡಿರುವ (UGD) ಒಳಚರಂಡಿ ಸಂಪರ್ಕ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆಯೇ; ಈ ಹೊಸ ಒಳಚರಂಡಿ ವ್ಯವಸ್ಥೆಯ ತ್ಯಾಜ್ಯ ನೀರು ಸ್ಥಳೀಯ ಕೆರೆಗಳಿಗೆ/ ಹಳ್ಳಗಳಿಗೆ/ತಗ್ಗು ಪ್ರದೇಶಗಳಿಗೆ ಹರಿಯುತ್ತಿದ್ದೆಯೇ; ಹೊಸ ಒಳಚರಂಡಿ ವ್ಯವಸ್ಥೆಗೆ ಎಸ್‌ಟಿಪಿಗಳಿಗೆ ಸಂಪರ್ಕ ಒದಗಿಸಲಾಗಿದೆಯೇ; ಈ ಕುರಿತಂತೆ ಸರ್ಕಾರದ ನಿಲುವೇನು? (ವಿವರವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಮತ್ತು ಇತರ ಮುಸ್ಲಿಂ ಪ್ರಜೆಗಳ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೨೧೪ (೨೧೪೩) ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅಕ್ರಮವಾಗಿ ಬಂದು ನೆಲೆಸಿರುವ ಬಾಂಗ್ಲಾ ಮತ್ತು ಇತರ ಮುಸ್ಲಿಂ ಪ್ರಜೆಗಳನ್ನು ಗುರುತಿಸಲು ಸರ್ಕಾರದ ಬಳಿಯಿರುವ ವ್ಯವಸ್ಥೆಗಳೇನು;

(ಆ) ಸದರಿ ವ್ಯವಸ್ಥೆಗಳು, ಈ ರೀತಿಯ ಸಮಸ್ಯೆಗಳನ್ನು ಗುರುತಿಸಿ ಕಾನೂನು ರೀತ್ಯಾ ಬಗೆಹರಿಸಲು ಸಮರ್ಪಕ ಸಂಖ್ಯೆಯಲ್ಲಿ ಹಣಕಾಸು, ಸಿಬ್ಬಂದಿ ಹಾಗೂ ತತ್ಸಂಬಂಧಿತ ವ್ಯವಸ್ಥೆಗಳನ್ನು ಹೊಂದಿದೆಯೇ;

(ಇ) ಕೊರತೆಗಳಿದ್ದಲ್ಲಿ, ಸರಿಪಡಿಸಲು ಸರ್ಕಾರದ ಕ್ರಮಗಳೇನು;

(ಈ) ಮುಸ್ಲಿಂ ಜನ ಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಸದರಿ ನುಸುಳುಕೋರರಿಗೆ ಸ್ಥಳೀಯರೇ ಸಹಕಾರ ನೀಡುತ್ತಿರುವುದು ಪೋಲಿಸ್ ಇಲಾಖೆಗೆ ಮತ್ತಷ್ಟು ಸಮಸ್ಯೆಗಳಿಗೆ ಕಾರಣವಾಗಿಲ್ಲವೇ; ಹಾಗಿದ್ದಲ್ಲಿ, ಸದರಿ ಸಮಸ್ಯೆಗಳನ್ನು ಎದುರಿಸಲು ಗೃಹ ಇಲಾಖೆ ಸಂಪೂರ್ಣ ಸ್ವಾಯತ್ತ ಬೇರೆ ಇಲಾಖೆ ರೂಪಿಸಿಕೊಳ್ಳಲು ಸರ್ಕಾರದ ಕ್ರಮಗಳೇನು;

(ಉ) ಈ ವ್ಯವಸ್ಥೆಗೆ ಪೂರ್ಣವಾಗಿ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಸತತ ನಿಗಾ ವಹಿಸಲು ಮೀಸಲು ಪಡೆಗಳ ವಾಹನಗಳನ್ನು ಸಿಬ್ಬಂದಿ ಸಮೇತ ಸಹಕಾರ ಪಡೆಯಲು ಸರ್ಕಾರದ ಕ್ರಮಗಳೇನು?

## ರಾಜ್ಯದಲ್ಲಿರುವ ಕ್ರೀಡಾ ಇಲಾಖೆಯ ಕ್ರೀಡಾಂಗಣ ಹಾಗೂ ಸಿಬ್ಬಂದಿಯವರ ಬಗ್ಗೆ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ ) –**

೨೯೫ (೨೧೮೯) ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷದಲ್ಲಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಮೂಲಕ ಕ್ರೀಡೆಗಾಗಿ ಬಜೆಟ್‌ನಲ್ಲಿ ಮೀಸಲಿಡಲಾದ ಹಣ ಎಷ್ಟು; ಅದರಲ್ಲಿ ಖರ್ಚಾದ ಹಣ ಎಷ್ಟು;

(ಆ) ರಾಜ್ಯದಲ್ಲಿ ಎಷ್ಟು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ಸ್ಥಾಪನೆ ಮಾಡಲಾಗಿದೆ; (ವಿವರವಾದ ಮಾಹಿತಿ ನೀಡುವುದು)

(ಇ) ಪ್ರತಿ ತಾಲ್ಲೂಕು ಮತ್ತು ಜಿಲ್ಲಾ ಕ್ರೀಡಾಂಗಣಗಳಲ್ಲಿ ಎಷ್ಟು ತರಬೇತಿದಾರರು ಹಾಗೂ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ; ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರು ಏಜೆನ್ಸಿ/ಗುತ್ತಿಗೆ/ಅಥವಾ ಖಾಯಂ ಆಧಾರರಿತ ನೌಕರರೇ; (ವಿವರ ನೀಡುವುದು)

(ಈ) ತಾಲ್ಲೂಕು ಹಾಗೂ ಜಿಲ್ಲಾ ಕ್ರೀಡಾಂಗಣಗಳನ್ನು ನಿರ್ವಹಣೆ ಮಾಡಲು ಎಷ್ಟು ಅನುದಾನವನ್ನು ನೀಡಲಾಗುತ್ತಿದೆ; (ತಾಲ್ಲೂಕುವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಕಳೆದ ಮೂರು ವರ್ಷಗಳಿಂದ ವೈಯಕ್ತಿಕ ಪಂದ್ಯಾಟ ಹಾಗೂ ಗುಂಪು ಆಟಗಳಲ್ಲಿ ರಾಷ್ಟ್ರ–ಅಂತರ ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದವರು ಮಾಡಿರುವ ಸಾಧನೆಗಳು ಏನು? (ವಿವರವಾದ ಮಾಹಿತಿ ನೀಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕುರಿತು

**ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) –**

೨೯೬ (೨೧೪೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೫–ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ನೀಡುವುದು;

(ಆ) ಮೇಲ್ಕಂಡ ಸಿಬ್ಬಂದಿಗಳಲ್ಲಿ ಲೋಕಾಯುಕ್ತ ಎ.ಸಿ.ಬಿ., ಐಟಿ ದಾಳಿ, ಇಲಾಖಾ ವಿಚಾರಣೆ, ಇಂತಹ ಪ್ರಕರಣಗಳನ್ನು ಎದುರಿಸುತ್ತಿರುವ ಸಿಬ್ಬಂದಿಗಳ ಹೆಸರು ಮತ್ತು ಪದನಾಮಗಳೊಂದಿಗೆ ವಿವರಗಳನ್ನು ನೀಡುವುದು;

(ಇ) ಮೇಲ್ಕಂಡ ಸಂಸ್ಥೆಗಳಿಂದ ತನಿಖೆಯನ್ನು ಎದುರಿಸುತ್ತಿದ್ದರೂ ಕೆಲವು ಅಧಿಕಾರಿ/ಸಿಬ್ಬಂದಿಗಳು ಬಿ.ಡಿ.ಎ ನಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವುದಕ್ಕೆ ಕಾರಣವೇನು; ಈ ಸಿಬ್ಬಂದಿಗಳಿಂದ ಸರ್ಕಾರಕ್ಕೆ ಆಗಿರುವ ನಷ್ಟ ಎಷ್ಟು? (ಮಾಹಿತಿ ನೀಡುವುದು)

## ೨೦೨೦–೨೧ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೨೯೭ (೨೧೧೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೨೦–೨೧ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಗೆ ಸಂಬಂಧಿಸಿದ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ಕಾಮಗಾರಿವಾರು ವಿವರ ನೀಡುವುದು)

(ಆ) ಸದರಿ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳು ಮುಕ್ತಾಯವಾಗಿವೆ ಹಾಗೂ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ;

(ಇ) ಈ ಕಾಮಗಾರಿಗಳಿಗೆ ಮಂಜೂರಾದ, ಬಿಡುಗಡೆಯಾಗಿರುವ ಮತ್ತು ಖರ್ಚಾದ ಅನುದಾನವೆಷ್ಟು; (ಕಾಮಗಾರಿವಾರು ಮಾಹಿತಿ ನೀಡುವುದು)

(ಈ) ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು?

## ಮಂಡ್ಯ ಜಿಲ್ಲೆಯಲ್ಲಿ ಕೆರೆ ತುಂಬಿಸುವ ಕಾಮಗಾರಿಗಳ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ ) –**

೨೯೮ (೨೧೫೫) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಕೆರೆಗಳನ್ನು ತುಂಬಿಸಲು ಯಾವ ಯೋಜನೆಗಳನ್ನು ರೂಪಿಸಲಾಗಿದೆ; (ವಿವರ ನೀಡುವುದು)

(ಆ) ಸದರಿ ಯೋಜನೆಯ ರೂಪರೇಷೆಗಳೇನು; (ವಿವರ ನೀಡುವುದು)

(ಇ) ಸದರಿ ಯೋಜನೆಯ ಅಂದಾಜು ಮೊತ್ತವೆಷ್ಟು; (ವಿವರ ನೀಡುವುದು)

(ಈ) ಸದರಿ ಯೋಜನೆಗಳ ಸಂಬಂಧ ಇದುವರೆವಿಗೂ ಬಿಡುಗಡೆಯಾಗಿರುವ ಮೊತ್ತವೆಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು)

(ಉ) ಕಾಮಗಾರಿಗಳು ಯಾವ ಹಂತದಲ್ಲಿವೆ? (ಪ್ರತ್ಯೇಕವಾಗಿ ವಿವರ ನೀಡುವುದು)

## ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೯೯ (೨೧೦೫) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೯–೨೦ ಮತ್ತು ೨೦೨೦–೨೧ರ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು;

(ಆ) ಬಿಡುಗಡೆಯಾದಂತಹ ಅನುದಾನದಲ್ಲಿ ಕೈಗೊಂಡಿರುವಂತಹ ಕಾಮಗಾರಿಗಳು ಪ್ರಸಕ್ತ ಶೇಕಡಾ ಎಷ್ಟರ ಪ್ರಮಾಣದಲ್ಲಿ ಮುಕ್ತಾಯಗೊಂಡಿರುತ್ತದೆ;

(ಇ) ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಸದರಿ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕಾಮಗಾರಿಗಳು ಪೂರ್ಣಗೊಂಡ ನಂತರದಲ್ಲಿ ಬಿಡುಗಡೆಯಾಗುವ ಹಣ ಭರವಸೆ ಪತ್ರವನ್ನು (ಎಲ್‌ಓಸಿ) ಯಾವ ಮಾನದಂಡದಲ್ಲಿ ಬಿಡುಗಡೆ ಮಾಡಲಾಗುತ್ತದೆ;

(ಉ) ೨೦೨೦ನೇ ಸಾಲಿನಲ್ಲಿ ಸದರಿ ಜಿಲ್ಲೆಗಳಿಗೆ ಬಿಡುಗಡೆಯಾದ ಹಣ ಭರವಸೆ ಪತ್ರದ (ಎಲ್‌ಓಸಿ) ಮಾಹಿತಿಯನ್ನು ನೀಡುವುದು?

## ಬೀದರ್ ಜಿಲ್ಲೆಯಲ್ಲಿ ಕಳ್ಳಭಟ್ಟಿ ತಯಾರಿಕೆ ಹಾಗೂ ಮದ್ಯ ಕಳ್ಳ ಸಾಗಾಣೆ ಕುರಿತು

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೩೦೦ (೨೧೩೯) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಹೆಚ್ಚಾಗಿರುವುದು ಹಾಗೂ ನೆರೆಯ ರಾಜ್ಯಗಳಿಂದ ರಾಜ್ಯಕ್ಕೆ ಮದ್ಯವು ಕಳ್ಳ ಸಾಗಾಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೀದರ್ ಜಿಲ್ಲೆಯಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕಾ ಕೇಂದ್ರಗಳ ಮೇಲೆ ದಾಳಿ ಮಾಡಿ ಎಷ್ಟು ಪ್ರಕರಣಗಳನ್ನು ದಾಖಲಿಸಿ ಅಪರಾಧಿಗಳನ್ನು ಬಂದಿಸಲಾಗಿದೆ ಮತ್ತು ಶಿಕ್ಷೆಗೊಳಪಡಿಸಲಾಗಿದೆ; (ಮಾಹಿತಿ ನೀಡುವುದು)

(ಇ) ನೆರೆಯ ರಾಜ್ಯಗಳಿಂದ ಮದ್ಯ ಕಳ್ಳಸಾಗಾಣೆಯ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಮತ್ತು ಎಷ್ಟು ಅಪರಾಧಿಗಳಿಗೆ ಶಿಕ್ಷೆವಿಧಿಸಲಾಗಿದೆ;

(ಈ) ಕಳ್ಳಭಟ್ಟಿ ಮಾರಾಟ ಕೇಂದ್ರಗಳನ್ನು ಹಾಗೂ ಮದ್ಯ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರವು ಯಾವ ಯಾವ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ–951, 400ಪ್ರತಿಗಳು (ಪಿ5)

**List of Questions for Oral Answers**

**Total No. of Questions - 15**

# LIST - 20

# KARNATAKA LEGISLATIVE COUNCIL

## ONE HUNDRED AND FORTY THIRD SESSION

## (Adjourned Meetings)

## Thursday, the 25th March, 2021

---

**GROUP - IV**

1. Chief Minister
2. Minister for Home and Law, Parliamentary Affairs and Legislation
3. Minister for Minor Irrigation
4. Minister for Excise
5. Minister for Youth Empowerment and Sports and Planning

---

*DEVELOPING THE TOMB PLACE OF KEMPEGOWDA AS TOURIST SPOT*

*Sri B.K. Hariprasad (Elected by Legislative Assembly)*-

286 (2115) Will the Chief Minister be pleased to state:-

a) whether step would be taken to develop Kempapura, tomb place (samadhi stala) of Hiriya Kempegowda as tourist spot; whether outlines have been prepared in this regard;

b) whether the fort of Kempegowda's period located in Magadi town has been developed; the particulars of developmental works completed so far; the particulars of works yet to be completed;

c) the measures taken to develop the tourist centre of Savanadurga; whether appropriate action would be taken to ply the red board rural city transport buses in regular intervals from Bengaluru to Savanadurga for the convenience of tourists after consultation with Bengaluru Metropolitan Transport Corporation?

*DAMAGE OF LAND/ROAD/CROP ON RIVER BANK*

*Sri Basavaraj Patil Itagi (Local Authorities Constituency)*-

287 (2095) Will the Chief Minister be pleased to state:-

a) whether it has come to the notice of the Government that extensive damage is being caused to the land/ crop/ roads in the river banks due to overflow of rivers in Raichur district every year in rainy season;

b) if so, the measures taken by the Government to control the flood in rainy season permanently and whether discussion is going on at Government level; if so, the details be furnished?

*JAKKUR AERODROME OF BENGALURU*

*Sri K. Govindaraj (Elected by Legislative Assembly)*-

288 (2131) Will the Minister for Youth Empowerment and Sports and Planning be pleased to state:-

a) the total extent of Jakkur aerodrome of Bengaluru; whether any encroachment took place in that area; the requirement of additional space; (details be furnished)

b) whether the Government Flying Training School is operating; if not, the reasons therefor; the measures taken to operate the same; (details be furnished)

c) the criteria for admission to pilot course; the fees thereof; the number of pilots who have been imparted training till now; (yearwise details be furnished)

d) the number of aircrafts purchased for pilot training; the model, capability and rates thereof; out of which, whether all the aeroplanes are in flying condition; (details be furnished)

e) the total strength of staff inlcuding pilots in Government Flying Training School; the number of vacant posts; whether said school has technically appropriate and standard basic facility and teaching staff in cope up with the modern world; whether drone training is being imparted in the said school; (details be furnished)

f) whether aircraft hangars are there in Jakkur aerodrome; the name of the person to whom the Government has entrusted the maintenance of the said hangars; (complete details be furnished)

g) whether the Government has considered the said Government Flying Training School seriously?

*CHANGE OF LAND USE IN B.D.A*

*Sri Kantharaj (BML)(Local Authorities Constituency)-*

289 (2198) Will the Chief Minister be pleased to state:-

a) the date on which Bengaluru Development Authority was established; the objectives of the said Authority; (detailed information be furnished)

b) the purposes for which the said Authority has the power to acquire, develop and transfer the land; (purposeswise information be furnished in detail)

c) the definition of land use; the types of land use; the particulars of land uses which come in the limits of said Authority;

d) the definition of change of land use; the types thereof; the particulars thereof; the number of change of land use which comes in the limits of the Authority; (detailed information be furnished)

e) the number of change of land use cases took place in the limits of said Authority from January 2018-19 to 2020-21; (layoutwise, yearwise detailed information be furnished)

f) whether the power of changing the land use is vested with either the Authority or the Government?

## *CONSTRUCTION OF NEW LAKES AND DAMS*

*Sri M.A. Gopalaswamy (Local Authorities Constituency)*-

290 (2122) Will the Minister for Minor Irrigation be pleased to state:-

a) the number of new lakes, pickup bandaras and dams constructed in Hassan district by the Minor Irrigation department during the last 3 years; the present stage of said works; the amount sanctioned and released for these works; out of which, the grant released to the contractors; (workwise details be furnished)

b) the number of lakes, pickup bandaras and dams constructed in Hassan district under SCP/ TSP scheme by the said department during the last 3 years; the present stage of the works; the amount sanctioned and released for these works; out of which, the grant released to the contractors; (workwise details be furnished)

c) the particulars of lakes of Hassan district wherein repair, rejuvenation and renovation works have been taken up by the said department during the last 3 years; the present stage of the works; the grant sanctioned and released for these works; out of which, the grant released to the contractors? (workwise details be furnished)

## *NIRBHAYA FUND*

*Sri N. Ravi Kumar (Elected by Legislative Assembly)*-

291 (2149) Will the Minister for Home and Law, Parliamentary Affairs and Legislation be pleased to state:-

a) the particulars of items for which Nirbhaya fund has been spent by the Police department in Bengaluru City during the past 5 years; (divisionwise information be furnished)

b) the stand of the Government as on the news reported in the newspapers stating that the Secretary to Government, Home department has given statement about corruption committed by the Additional Commissioner of Police in the expenses under Nirbhaya Fund;

c) whether corruption is taken place in the expenses under Nirbhaya Fund; if not, whether the Secretary to Government is giving false information to the public of the State; the stands of the Government in this regard;

d) the action taken by the Government against the officer on whom corruption charge has been levelled?

*ILL EFFECT OF ALCOHOL CONSUMPTION AND LICENCE TO LIQUOR SHOPS*

*Sri R. Dharmasena (Local Authorities Constituency)-*

*Sri H.M. Ramesha Gowda (Elected by Legislative Assembly)-*

292 (2205+2125) Will the Minister for Excise be pleased to state:-

a) whether it is appropriate that the Government is giving licence to open liquor shops even though several ill effects are being occurred in the society and many families are losing their livelihood due to alcohol consumption;

b) whether the survey has been conducted as to the places where liquor shops have to be opened and the number of liquor shops have to be opened on par with population in urban and rural areas; the basis on which licence has been issued;

c) the criteria followed to issue and obtain CL2, CL4, CL6A, CL7, CL9, CL11C, R.V.B and other licences in the State; (complete details be furnished)

d) whether it has come to the notice of the Government that the liquor entrepreneures who obtained one licence are being run liquor shops/ bar and restaurants and other shops in different places of the district under the same licence only; if so, the steps taken by the Government; (details be furnished)

e) whether the Government is aware of the fact that the licence issuing authorities have issued licence in violation of norms without following them while issuing licence; if so, the particulars of disciplinary action taken against the concerned officers; (details be furnished)

f) the number of cases in which rules have been violated without following norms while issuing licence in the State; (details be furnished) the steps taken by the Government against the said cases? (details be furnished)

*THE CONDITION OF LAKES IN BENGALURU CITY*

*Sri P.R. Ramesh (Nominated)-*

293 (2156) Will the Chief Minister be pleased to state:-

a) the total number of lakes as per revenue records in Bengaluru city; the number of lakes which have lost their characteristics and used for other activities; the total number of lakes having water storage and the number of lakes rejuvenated; the number of lakes need to be rejuvenated in future; (detailed information be furnished)

b) whether Bengaluru Water Supply and Sewerage Board has provided underground drainage (UGD) connections to authorised and unauthorised layouts which are newly added to the BBMP limits; whether waste water of new UGD connection is flowing into lakes/ streams/ low lying areas; whether new underground drainage (UGD) has been connected to STP; the stand of the Government in this regard? (detailed information be furnished)

*BANGLA AND OTHER MUSLIM CITIZENS STAYING ILLEGALLY IN THE STATE*

*Smt. Bharathi Shetty (Nominated)-*

294 (2143) Will the Minister for Home and Law, Parliamentary Affairs and Legislation be pleased to state:-

a) the mechanism of the Government to identify Bangla and other muslim citizens who are staying illegally in the State;

b) whether the said mechanism has adequate financial support, staff and related facilities to identify and resolve such problems as per law;

c) if there is any short coming, the steps of the Government to fulfill the same;

d) whether it would not a problem to police department that localites are co-operating with inflitrators in the area where muslim population is more in number; if so, the actions of the Government to create fully other autonomous department by Home department to face the said challenges;

e) the actions of the Government to get co-operation of the reserved force vehicles along with armed personnel for continuous surveillance in the area where muslim population is more in number?

*STADIUMS AND STAFF OF THE SPORTS DEPARTMENT IN THE STATE*

*Sri S.V. Sankanur (Graduates' Constituency)*-

295 (2179) Will the Minister for Youth Empowerment and Sports and Planning be pleased to state:-

a) the grant earmarked in the budget for Sports by Youth Empowerment and Sports department during the last 3 years; out of that, the amount spent for the same;

b) the number of taluk and district headquarters where stadiums have been constructed in the State; (detailed information be furnished)

c) the number of trainees and staff appointed to each taluk and district stadiums; whether the staff who are working here have been appointed through agency/ on contract or permanent basis; (details be furnished)

d) the grant being provided for maintenance of taluk and district stadiums; (talukwise, districtwise information be furnished)

e) the achievements of the sports persons of the State at National and International level in individual events and team sports for the last 3 years? (detailed information be furnished)

*BENGALURU DEVELOPMENT AUTHORITY*

*Dr. Y.A. Narayanaswamy (Teachers'Constituency)*-

296 (2144) Will the Chief Minister be pleased to state:-

a) the details of the officers/ staff who are working in BDA for the last 5 years;

b) out of the aforesaid officers/ staff, the details along with the name and designation of the staff who are facing Lokayukta, ACB, IT raids and departmental enquiry and so on;

c) the reasons for which some officers/ staff are working in BDA itself even though they are facing investigation by the aforesaid agencies; the loss caused to the Government exchequer by such officers? (information be furnished)

*IMPLEMENTATION OF WORKS IN KODAGU DISTRICT FOR THE YEAR 2020-21*

*Smt. S.Veena Achaiah (Elected by Legislative Assembly)*-

297 (2109) Will the Chief Minister be pleased to state:-

a) the number of works undertaken with regard to major and medium irrigation in Kodagu district during the year 2020-21; (workwise details be furnished)

b) out of the said works, the number of completed and ongoing works;

c) the grant sanctioned, released and spent for these works; (workwise information be furnished)

d) the timelimit within which the ongoing works would be completed?

### *TANK FILLING WORKS IN MANDYA DISTRICT*

*Sri Marithibbe Gowda (Teachers' Constituency)*-

298 (2159) Will the Minister for Minor Irrigation be pleased to state:-

a) the particulars of schemes that have been chalked out for filling up of tanks in Mandya district for the last 2 years; (details be furnished)

b) the outlines of the said scheme; (details be furnished)

c) the estimated cost of the said scheme; (details be furnished)

d) the grant released for the said scheme so far; (separate details be furnished)

e) the present stage of the works? (separate details be furnished)

### *GRANTS RELEASED TO DHARWAD, GADAG AND HAVERI DISTRICTS*

*Sri Pradeep Shettar (Local Authorities Constituency)*-

299 (2105) Will the Minister for Minor Irrigation be pleased to state:-

a) the grants released to Dharwad, Gadag and Haveri districts by the Minor Irrigation department during 2019-20 and 2020-21;

b) the percentage of works that have been completed at present out of the works undertaken in the released grants;

c) the actions taken by the Government to complete the pending works;

d) the criteria based on which the letter of credit (LOC) would be released after completion of works by Minor irrigation in the said districts;

e) the information about the letter of credit (LOC) released to the said districts during the year 2020 be furnished?

*MANUFACTURING OF ILLICIT LIQUOR AND ILLEGAL TRANSPORTATION OF LIQUOR IN BIDAR DISTRICT*

*Sri Raghunath Rao Malkapure (Elected by Legislative Assembly)*-

300 (2139) Will the Minister for Excise be pleased to state:-

a) whether it has come to the notice of the Government that the illicit liquor manufacturing cases rise in Bidar district and liquor is transporting to the State from neighbouring States illegally;

b) if so, the number of cases that have been lodged after raids on illicit liquor manufacturing units and the number of accused persons who have been arrested and punished in this regard in Bidar district; (details be furnished)

c) the number of cases of transporting the liquor illegally from neighbouring States which have been traced out in Bidar district and the number of accused persons who have been punished in this regard;

d) the particulars of stringent actions taken by the Government to prevent sale of illicit liquor and illegal transportation of liquor? (complete information be furnished)

**K.R. MAHALAKSHMI**
Secretary
Karnataka Legislative Council

Govt. Press, Vikasa Soudha, Bengaluru, P7, wd 951, 400 Copies